


International Journal of Kannada Research
www.kannadajournal.com



**ISSN: 2454–5813**
IJKR 2017; 3(3): 01-04

© 2017 IJKR

www.kannadajournal.com
Received: 01-05-2017
Accepted: 02-06-2017



**HT Tirakappa**
Assistant Professor
SKCE Hangal.
Research Scholar
KUD. Karnataka
India



**Correspondence**
**HT Tirakappa**
Assistant Professor
SKCE Hangal.
Research Scholar
KUD. Karnataka
India


# ಹರಿದಾಸ ಸಾಹಿತ್ಯದಲ್ಲಿ ಜೀವನದ ಮೌಲ್ಯಗಳು

**HT Tirakappa**

ಹರಿದಾಸ ಸಾಹಿತ್ಯವು ವಿಶಿಷ್ಟ ಬಗೆಯ ಸಾಹಿತ್ಯ, ಸಾಮಾನ್ಯವಾಗಿ ದೇಶದ ಉದ್ದಗಲಕ್ಕೂ ಒಂದಲ್ಲ ಒಂದು ಬಗೆಯ ಭಕ್ತಿ ಸಾಹಿತ್ಯ ಆಯಾ ಪ್ರಾದೇಶಿಕ ಭಾಷೆಯಲ್ಲಿ ಸ್ವಲ್ಪ ಮಟ್ಟಿಗಾದರೂ ಪ್ರಸಾರದಲ್ಲಿರುತ್ತದೆ, ಆದರೆ ಅವುಗಳಲ್ಲಿ ಹೆಚ್ಚಿನವು ಕೇವಲ ಭಾವುಕತೆ ಮೂಢನಂಬಿಕೆಗಳ ಸಂಕುಚಿತವಾದ ಅಭಿವ್ಯಕ್ತಿಯನ್ನೇ ಹೊಂದಿರುತ್ತವೆ. ತಾತ್ವಿಕ ತಳಹದಿಯಾಗಲಿ, ಸೈದ್ಧಾಂತಿಕ ಸ್ವಂತಿಕೆಯನ್ನಾಗಲಿ ಹೊಂದಿರುವುದು ತುಂಬ ವಿರಳ ವಿವಿಧ ಭಾಷೆಯ ನಂತರ ಕೃತಿಗಳು ಹೆಚ್ಚಾಗಿ ಈ ಬಗೆಯವು ಆದರೆ ಹರಿದಾಸಸಾಹಿತ್ಯ ವೈದಿಕ ಭಕ್ತಿ ಸಾಹಿತ್ಯ ಕೀರ್ತನೆಗಳು ಪಲ್ಲವಿ ಹಾಗೂ ನುಡಿಗಳ ಪರಿಕಲ್ಪನೆಯಲ್ಲಿ ವೈದಿಕ ಸೂಕ್ತದ ಛಾಯೆಯನ್ನು ಸ್ಪಷ್ಟವಾಗಿ ಕಾಣಬಹುದು. ಅದರ ಸೈದ್ಧಾಂತಿಕ ನೆಲೆಗಟ್ಟಂತೂ ಶ್ರೀ ಮಧ್ವಾಚಾರ್ಯರ ವಿಷ್ಣು ಪಾರಮ್ಯ, ಜಗತ್ಸತ್ಯತ್ವ ಮೊದಲಾದ ಮಹಾಪ್ರಮೇಯಗಳನ್ನು ನಿರೂಪಿಸುವ ದ್ವೈತಸಿದ್ದಾಂತವೇ ಆಗಿದೆ. ಪರಿಶುದ್ಧ ಭಕ್ತಿಗೆ ಸಾಧನ, ಸಿದ್ಧಿ ಮೊದಲಾಗಿ ಎಲ್ಲ ಹಂತದಲ್ಲೂ ಪ್ರಧಾನ ಸ್ಥಾನ ನೀಡಿದ ಏಕಮಾತ್ರ ಸಿದ್ಧಾಂತ. ಮಧ್ವಸಿದ್ಧಾಂತ ಅನಾದ್ಯನಂತಕಾಲದ ಯಾವುದೇ ಹಂತದಲ್ಲೂ ಭಕ್ತಿಗೆ ಪರಮೋಚ್ಛ ಸ್ವಾನವನ್ನು ನೀಡಿರುವುದು ಇದರ ವೈಶಿಷ್ಟ್ಯ. ಅದರ ಭದ್ರವಾದ ತಾತ್ವಿಕ ತಳಹದಿಯನ್ನು ಶ್ರೀ ಮದ್ವಾಚಾರ್ಯರು ಸರ್ವಮೂಲಗ್ರಂಥಗಳಲ್ಲಿ ಅನಂತರದ ಟೀಕಾಟಿಪ್ಪಣಿಗಳಲ್ಲಿ ಮನಗಾಣಬಹುದು. ಇದರಿಂದಾಗಿ ದಾರ್ಶನಿಕ ಚಿಂತನೆಯ ಘಟ್ಟದಲ್ಲಿ ದೃಢವಾಗಿ ನಿಲ್ಲುವುದು ಇದರ ಹಿರಿಮೆ ಹರಿದಾಸ ಸಾಹಿತ್ಯವು ಮಧ್ವಸಿದ್ದಾಂತವನ್ನು ಯಥಾವತ್ತಾಗಿ ಕನ್ನಡ ಭಾಷೆಯಲ್ಲಿ ಆವಿಷ್ಕರಿಸಿದ ಅಪೂರ್ವಸಾಹಿತ್ಯ ಅದರಿಂದಾಗಿ ದಾಸರ ಕೃತಿಗಳಲ್ಲಿ ಸಾಮಾಜಿಕ ಚಿಂತನೆಯೊಂದಿಗೆ ಆಳವಾದ ತಾತ್ವಿಕ ಚಿಂತನೆ ಎದ್ದು ಕಾಣುತ್ತದೆ. ಇತಿಹಾಸ ಪುರಾಣಗಳ ಹಿನ್ನೆಲೆಯಿಂದಾಗಿ ಇದರ ವಿಷಯ ಸಂಪತ್ತು ಅಗಾಧವೆನ್ನಿಸಿದೆ. ಬೀಗುವ ಜನಗಳನ್ನು ಭಗವಂತನಿಗೆ ಬಾಗುವಂತೆ ಮಾಡುವ ಮಾಂತ್ರಿಕ ಶಕ್ತಿ ಹರಿದಾಸ ಸಾಹಿತ್ಯದ್ದು.

ಹುಟ್ಟು ಸಾವುಗಳ ಮಧ್ಯದ ಬದುಕು ಸುಸಂಸ್ಕೃತವಾಗಿರಬೇಕು, ಸಮೃದ್ಧವಾಗಿರಬೇಕು. ಜೀವನದ ಪ್ರತಿ ಕ್ಷಣ ಸುಸಂಸ್ಕೃತವಾದಾಗ ಜೀವನವೇ ಯಜ್ಞವಾಗುವುದು ಅದಕ್ಕಾಗಿ ಜೀವನ ಉನ್ನತ ಮೌಲ್ಯಗಳ ಮೇಲೆ ಆಧಾರವಾಗಿದೆ.

ತತ್ವಜ್ಞಾನ ನಿಂತ ನೀರಾಗದೆ ನಿರಂತರ ಹರಿಯುವ ಪ್ರವಾಹವಾಗಬೇಕು. ಆಗಲೇ ಅದು ಜೀವಂತ ಸಾಹಿತ್ಯವಾಗುವುದು. ಸಾರ್ವಕಾಲಿಕವಾದ ಜೀವನದ ಭಾಷ್ಯವೆನಿಸುವುದು ಎಲ್ಲರ ಜೀವನವನ್ನು ಬೆಳಗುವ ಅಂತಹ ಜೀವಂತ ಸಾಹಿತ್ಯವೇ ಹರಿದಾಸ ಸಾಹಿತ್ಯ, ಪ್ರತಿಯೊಬ್ಬನ ಅಂತರಂಗ ಹಾಗೂ ಬಹಿರಂಗದ ವೃತ್ತಿ ಪ್ರವೃತ್ತಿಗಳನ್ನು ಭಾವನೆ ಕ್ರಿಯೆಗಳನ್ನು ಏಕಾಕಾರವಾಗಿಸುವ ಸಾಹಿತ್ಯವೇ ಹರಿದಾಸ ಸಾಹಿತ್ಯ. ವಿಚಾರಕ್ಕೂ ಆಚರಣೆಗೂ ಮಾತು ಮತ್ತು ಕೃತಿಗಳಲ್ಲಿ ವ್ಯವಹಾರ ಹಾಗೂ ಆಧ್ಯಾತ್ಮಿಕಕ್ಕೂ ಬುದ್ಧಿ ಹಾಗೂ ಭಾವನೆಗೂ ಇರುವ ಅಂತರದ ವ್ಯತ್ಯಾಸವನ್ನು ಕಡಿಮೆ ಮಾಡಿ ಅದನ್ನು ಒಂದುಗೂಡಿಸುವ ಪ್ರಾಮಾಣಿಕ ಜೀವನದ ಪ್ರಯತ್ನವೇ ಹರಿದಾಸ ಸಾಹಿತ್ಯ, ದಾಸಸಾಹಿತ್ಯಕ್ಕೆ ಪ್ರಯತ್ನಿಸಿದವರೇ ಹರಿದಾಸರು. ಅಂತೆಯೇ ಜೀವನದ ಅಂಗಾಗಗಳಾದ ಸಾಹಿತ್ಯ ಸಂಗೀತ, ಕಲೆ,ಇತಿಹಾಸ, ರಾಜನೀತಿ, ಹಸಿವೆ, ನೀರಡಿಕೆ, ಕಾಮ, ಪ್ರೀತಿಯಿಂದ ಶ್ವಾಸೋಚ್ಛಾಸದವರೆಗಿನ ಎಲ್ಲ ಪ್ರವೃತ್ತಿಗಳನ್ನು ಇಡಿಯಾಗಿ ಸ್ವೀಕರಿಸಿ ಅದನ್ನು ಧರ್ಮದ ಅಂಗವಾಗಿಸಿ ಅದನ್ನು ವಿಷ್ಣು ಪೂಜೆ ಎಂದಾಗಿಸಿದ ವಿಶಾಲ ದೃಷ್ಟಿಯ ಸೃಷ್ಠಿಯೇ ಹರಿದಾಸ ಸಾಹಿತ್ಯ, ಇದೇ ಜೀವನಯಜ್ಞದ ಹರಿದಾಸರ ವಿಚಾರಧಾರೆ ಅದರಿಂದಾಗಿ ಪ್ರತಿಕ್ಷಣ ಪ್ರತಿಯೊಂದು ಕ್ರಿಯಾಕರ್ಮದ ಆತ್ಮವಿಮರ್ಶೆ ಅನಿವಾರ್ಯವಾಗುವುದು ಈ ಆತ್ಮ ಚಿಂತನೆ ಸಹಜವಾಗಿ ಅವರಲ್ಲಿ ಕೀಳ್ತನವನ್ನು ನಿಗ್ರಹಿಸಿ ಒಳ್ಳೆಯ ಗುಣಗಳನ್ನು ಬೆಳೆಸಲು ಕಾರಣವಾಗುವುದು. ಇದರಿಂದಾಗಿ ವ್ಯಕ್ತಿ ಜೀವನ ಅವರ ಜೊತೆಗೆ ಸಮಾಜ ಜೀವನ ಶುದ್ಧವಾಗುವುದು ಅಂತೇಯೇ ದಾಸರು ಸಾಧನಕೆ ಬಗೆಗಾಣದೆನ್ನಬಹುದೇ? ಕಂಡ ಕಂಡದ್ದೆಲ್ಲ ಕಮಲನಾಭನ ಮೂರ್ತಿ, ಉಂಡು ಉಟ್ಟದ್ದೆಲ್ಲ ವಿಷ್ಣು ಪೂಜೆ ಎಂದರು, ಮಕ್ಕಳಾಡಿಸುವಾಗ ಮಡದಿಯೊಳು ಅಕ್ಕರದಿ ನಲಿವಾಗ, ಹಯ ಪಲ್ಲಕ್ಕಿವಾಹನವೇರಿ ಮೆರೆವಾಗ, ಬಿಕ್ಕುವಾಗ, ಆಕಳಿಸುತಲಿರುವಾಗ, ಭಗವಂತನ ಸ್ಮರಣೆ ಇದ್ದರೆ ಇವೆಲ್ಲವೂ ಯಜ್ಞವೇ ಆಗುವವು ಎನ್ನುವುದು ಹರಿದಾಸ ಸಾಹಿತ್ಯ. ವರ್ತಮಾನ ಜೀವನದ ಬೆಲೆ

ಏರಿಸಿದವರು ಹರಿದಾಸರು ಹಾಗೂ ಹರಿ ದಾಸ ಸಾಹಿತ್ಯ. ಹರಿದಾಸರ ವಿಚಾರದಲ್ಲಿ ಸಾಹಿತ್ಯವಿದೆ, ಸಂಗೀತವಿದೆ, ಕಲೆಯಿದೆ ರಸವಿದೆ, ರಂಜಕತೆ ಇದೆ ಅದಕ್ಕೆ ಇದು ಅತ್ಯಂತ ಜನಪ್ರಿಯ ಈ ಜನಪ್ರಿಯ ಮಾದ್ಯಮದ ಮೂಲಕ ಶ್ರೀ ಸಾಮಾನ್ಯರನ್ನು ಈ ವೈಶಿಷ್ಟ್ಯಪೂರ್ಣ ಸಾಹಿತ್ಯದಿಂದಾಗಿ ಒಂದುಗೂಡಿಸಿ ಸ್ತ್ರೀಪುರುಷರೆಲ್ಲರಿಗೂ ಈ ಹರಿದಾಸ ಸಾಹಿತ್ಯದ ಬಗ್ಗೆ ಆತ್ಮಿಯತೆ ಬೆಳೆಯಿತು. ಹರಿದಾಸ ಸಾಹಿತ್ಯದ ಮೂಲಕವಾಗಿ ಜನಮನದ ಹತ್ತಿರಕ್ಕೆ ಅವರಿಗೆ ಅರ್ಥವಾಗುವ ರೀತಿಯಲ್ಲಿ ವೈಚಾರಿಕತೆ ಸುಳಿದಿದೆ. ಜನಮಾನಸದ ಮನದ ಮೊಗ್ಗುಗಳನ್ನು ಉದುರಿಸುವ ಬಿರುಗಾಳಿಯಾಗಿಲ್ಲ. ಹರಿದಾಸರು ಒಂದೇ ಏಟಿಗೆ ಎಷ್ಟೊಂದು ಶುಷ್ಕ ಸಂಪ್ರದಾಯಗಳನ್ನು ಋಕ್ಷ ರೀತಿ ನೀತಿಗಳನ್ನು ಉರುಳಿಸುವರು ಶುದ್ಧವಾದ ಸಮನ್ವಿತವಾದ ಸಂಯಮಿತವಾದ ಶಾಸ್ತ್ರಸಿದ್ಧವಾದ ವಿಚಾರಗಳನ್ನು ತಿಳಿಗನ್ನಡದ ಮೂಲಕವಾಗಿ ಅರಳಿಸಿರುವರು.

ವೇದಶಾಸ್ತ್ರ, ಇತಿಹಾಸ, ಪುರಾಣಗಳಶಾಸ್ತ್ರ ಸೂತ್ರಗಳ ಪ್ರಮಾಣ ಗ್ರಂಥಗಳಲ್ಲಿ ಚರ್ಚಿಸಿ, ವಿಶ್ಲೇಷಿಸಿ, ಉಪಕ್ರಮಾದಿಗಳಿಂದ ನಿರ್ಣಯಿಸಿ ನಿರೂಪಿಸಿದ ಸಕಲ ಪ್ರಮಾಣಗಳನ್ನು ಕೇವಲ ಕೆನೆಯಂತೆ ಸಂಗ್ರಹಿಸಿ ಹರಿದಾಸ ಸಾಹಿತ್ಯದ ಮೂಲಕ ಅವರು ಪ್ರಕಟ ಮಾಡಿದ್ದಾರೆ. ಹರಿದಾಸರು ವಯಕ್ತಿಕ ಸಂಘರ್ಷದಲ್ಲಿ ಸಿಲುಕಿ ಜೀವನದ ಅನುಭವಗಳನ್ನು ಕಂಡುಂಡು ನಿಃಸ್ವಾರ್ಥದ ನೆಲೆಗೆ ಬಂದ ಶಾಸ್ತ್ರೀಯ ಸಮಾಜ ಸುಧಾರಕರು, ಅವರು ತಮ್ಮ ಆತ್ಮೋದ್ಧಾರದ ಜೊತೆಗೆ ಸಮಾಜ ಉದ್ಧಾರಗೈದರು. ಅವರ ಬದುಕು ಬರಹ ಒಂದೇ ಆಗಿದ್ದೀತು. ಭರವಸೆಯ ಮೂಲಕವಾಗಿ ಬದುಕಿಗೆ ಒಳ್ಳೇಯ ಪ್ರೇರಣೆಯಗಳನ್ನು ನೀಡಿ ಜನರನ್ನು ಸನ್ಮಾರ್ಗದಲ್ಲಿ ಇರಿಸಿದರು. ಭಯಗಳನ್ನು ಬಿಂಬಿಸಿ ಅನರ್ಥಗಳನ್ನು ತಿಳಿಸಿ ಜನರನ್ನು ಕೆಟ್ಟ ಮಾರ್ಗದಲ್ಲಿ ಮುಂದುವರೆಯದಂತೆ ತಡೆದರು. ಇಂತಹ ಹರಿದಾಸ ಸಾಹಿತ್ಯ ವಿಶ್ವಗುರುವಿನಿಂದ ಪ್ರವರ್ತಿತ ವಿಶ್ವಸಾಹಿತ್ಯವಾಗಿದೆ.

ನಿತ್ಯವೂ ಸ್ನಾನಾದಿಗಳಿಂದ ದೇಹಶುದ್ದಿಯಾದರೆ ಸಾಲದು. ಸ್ನಾನ ಮಾಡಿರೊ ಜ್ಞಾನ ತೀರ್ಥದಲ್ಲಿ ಎಂಬುದೇ ದಾಸರ ಸಂದೇಶ, ನಿಷ್ಕಾಮವಾಗಿ ಲೋಕಹಿತಕಾರಕವಾದ ಕಾರ್ಯಗಳನ್ನು ಮಾಡುತ್ತಿರುವುದೇ ಚಿತ್ತಶುದ್ಧಿಗೆ ಕಾರಣ

ದಾನ ಧರ್ಮಗಳನ್ನು ಮಾಡುವುದೆ ಸ್ನಾನ
ಜ್ಞಾನ ತತ್ವಂಗಳ ತಿಳಿವುದೆ ಸ್ನಾನ

ಒಬ್ಬ ವ್ಯಕ್ತಿಯ ಇಹಪರಗಳ ಉನ್ನತಿಗೆ ಅವನೊಬ್ಬನೇ ಕಾರಣನಲ್ಲ. ಅವನ ಕೇವಲ ಪ್ರಯತ್ನ ಒಂದೇ ಸಾಲದು ಮಾನವ ಸಂಘಜೀವಿ ಅವನ ಹಿತವು ಇತರರ ಹಿತದಲ್ಲಿ ಅಡಗಿದೆ. ನಾವು ಯಾರಿಂದ ಉನ್ನತಿಯನ್ನು ಹೊಂದಿರುತ್ತೇವೋ ಅವರಿಗೆ ನಾವು ಋಣಿಗಳಾಗಿರಬೇಕು. ಪ್ರತಿಯೊಬ್ಬ ವ್ಯಕ್ತಿ ರಾಷ್ಟ್ರ ಜೀವನದಲ್ಲಿ ಅವನೊಬ್ಬ ಪ್ರಜೆ. ಈ ಮೂರು ಭೂಮಿಕೆಗಳಲ್ಲಿ ಅವನ ವ್ಯಕ್ತಿತ್ವದ ವಿಕಾಸವಾಗಬೇಕು. ವಿದ್ಯಾರ್ಥಿಯಾಗಿ (ಬ್ರಹ್ಮಚಾರಿ) ಜ್ಞಾನಸಂಗ್ರಹದಿಂದ ಋಷಿಗಳ ಋಣವನ್ನು ತೀರಿಸಬೇಕು. ದೇವತೆಗಳ ಋಣವನ್ನು ಅಗ್ನಿದೇವ ತಾರಾದನೆಗಳಿಂದ ಮಾತಾಪಿತೃಗಳ ಋಣವು ಗೃಹಸ್ಥಾಶ್ರಮಕಾರದಿಂದ ತಿರಿಸಬೇಕು ಇವೆಲ್ಲಕ್ಕೂ ಪ್ರತ್ಯಕ್ಷ ಫಲವಿಲ್ಲ. ಪರೋಕ್ಷ ಫಲದಾಯಕಗಳು, ನಾವು ಯಾರಿಂದಾದರೂ ಧನಸಹಾಯ ಪಡೆದಲ್ಲಿ ಅದನ್ನು ಸಕಾಲಕ್ಕೆ ತೀರಿಸಿ ವಿನಿಮಯ ಮಾಡಿಕೊಳ್ಳದಿದ್ದರೆ ಆ ಋಣ ನೀನು ಭೂ ಪ್ರದಕ್ಷಿಣೆ ಮಾಡಿದರು ಹೋಗದು. ದ್ರವ್ಯ ಹಣ ಯಾವಾಗಲೂ ದ್ರವರೂಪವಾಗಿ ಹರಿಯುತ್ತಾ ಇರಬೇಕು. ಅದು ಒಂದೆಡೆ ಸೇರಿ ತನಗೂ ಇತರರಿಗೂ ಅದು ಪ್ರಯೋಜನಕಾರಿಯಾಗದಿದ್ದರೆ ಅಂತವನನ್ನು ದೇವರು ಪ್ರಶ್ನಿಸುತ್ತಾನೆಂದು ಶ್ರೀ ವಿಜಯ ದಾಸರು ಸಮಾಜಕ್ಕೆ ಎಚ್ಚರಿಕೆಯನ್ನು ನೀಡುತ್ತಾರೆ.

ಋಷಿಗಳ ಋಣ ಪೂರ್ವಾಶ್ರಮದಿಂದ ಪರಿಹಾರ
ದಶರ ಋಣ ಮೇಧಾವಿಗಳು ಮಾಡೆ
ಅಸುಸಂಬಂಧಿಗಳ ಋಣ ಗೃಹಸ್ಥಾಶ್ರಮದಲಿ
ಪುಸಿಯಲ್ಲ ತಿದ್ದಿ ಹೋಗುವುದು ಸಿದ್ಧ

ಅರ್ಥವು ಪರಮಾರ್ಥಕ್ಕೆ ಸಹಾಯ ಮಾಡದಿದ್ದರೆ ಅದು ಅನರ್ಥಕ್ಕೆ ಕಾರಣವಾಗುತ್ತದೆ (ಅರ್ಥಮನರ್ಥಂ)ದ್ರವರೂಪವಾಗಿ ಸಮಾಜದಲ್ಲಿ ಹರಿದಾಡುವ ದ್ರವ್ಯವು ಒಂದೆಡೆ ಸೇರಿಕೊಂಡರೆ ಅದು ವ್ಯರ್ಥ ದಾಸರು ಅಂತಹಾ ಲೋಬಿಗಳಿಗೂ ಎಚ್ಚರಿಕೆಯಿತ್ತಿದ್ದಾರೆ.

ಹರಿಕೊಟ್ಟ ಕಾಲಕ್ಕೆ ಉಣಲಿಲ್ಲಾ। ಹರಿಕೊಡದ ಕಾಲ
ದಲಿ ಬಾಯ್ಬಿಡುವೆ ಪ್ರಾಣಿ ॥
ಹತ್ತು ಸಾವಿರ ಹೊನ್ನು ತಿಪ್ಪೇಲಿ ಹೂತಿಟ್ಟು
ಮತ್ತಿ ಉಪ್ಪಿಲ್ಲದೆ ಉಂಡ್ಯಲ್ಲೊ ಪ್ರಾಣಿ
ಹತ್ತು ಸಾವಿರ ಹೊನ್ನು ತಿಪ್ಪೇಲಿ ಪೋಪಾಗ
ಮೃತ್ತಿಕೆ ಬಾಯಲ್ಲಿ ಬಿತ್ತಲ್ಲೊ ಪ್ರಾಣಿ

ದಾಸರು ಸಾಮಾಜಿಕ ಅರ್ಥವ್ಯವಸ್ಥೆ ಹೇಗಿರಬೇಕು ಎಂಬುದನ್ನು ವಿವರಿಸಿ, ಅಸ್ಥಿರವಾದ ಚಂಚಲವಾದ ಐಶ್ವರ್ಯದಿಂದ, ಅದರ ಸಂಗ್ರಹದಿಂದ ಮೈಮರೆತು ಅಂಹಕಾರಪಡಬೇಡಾ. ನಿನ್ನ ಧನ ನಿಲ್ಲಲಾರದು

ಧನ ನಿಲ್ಲದಯ್ಯಾಸಾ।ಧನ ನಿಲ್ವುದಯ್ಯಾ। ಎನ್ನುವ ದಾಸರು ಸಮಾಜವು ಧನ ಪ್ರಾಣವಾಗಬಾರದು. ಅದು ಧರ್ಮಪ್ರಾಣವಾಗಬೇಕು ಎಂದಿದ್ದಾರೆ. ಸಮಾಜದಲ್ಲಿ ಹಣಕ್ಕೆ ಎಷ್ಟು ಪ್ರಾಧಾನ್ಯವಿದೆ ಎಂಬುದನ್ನು ಶ್ರೀ ವಾದಿರಾಜಯತಿಪುಂಗವರು ಅದರ ಗುಣ ಧರ್ಮಸಹಿತ ವರ್ಣಿಸಿದ್ದಾರೆ. ಹಣದ ಅತಿಶಯ ಪ್ರೇಮವು ಜೀವನ, ಉಜ್ಜೀವನಕ್ಕೆ ಧಕ್ಕೆಯುಂಟು ಮಾಡಬಲ್ಲದು.

ಹಣವೆ ನಿನ್ನಯ ಗುಣವೇನು ಬಣ್ಣವೇನೊ
ಹಣವಿಲ್ಲದವನೊಬ್ಬ ಹೆಣವೆ ಸರಿ ಕಂಡ್ಯ

ಪುರಂದರದಾಸರು ನಾರದರ ಅವತಾರ. ಪುರಂದರದಾಸರು ಹರಿದಾಸ ಶ್ರೇಷ್ಟರು. ಹರಿದಾಸ ಸಾಹಿತ್ಯ ಸಾರ್ವಭೌಮರೆಂಬ ಖ್ಯಾತಿಗಳಿಸಿದವರು.

ತಮ್ಮ ಜೀವನವನ್ನು ಶ್ರೀಮನ್ನಾರಾಯಣನ ಸೇವೆಗೆ ಮೀಸಲಾಗಿಟ್ಟರು ನಿನ್ನ ಬಿಟ್ಟು ಅನ್ಯರ ಭಜಿಸಿದರೆನಗೆ ಆಣೇ ರಂಗ ಎನ್ನನೀ ಕೈಬಿಟ್ಟು ಹೋದರೆ ನಿನಗೆ ಆಣೆ ! ಎಂದು ಹಾಡಿದ್ದಾರೆ. ದೈವನಿಂದನೆಯನ್ನು ಅವರು ಸಹಿಸುತ್ತಿರಲಿಲ್ಲ, ಕೇಳಲೂ ಅಂಜುತ್ತಿದ್ದರು. ಆಕಸ್ಮಿಕವಾಗಿ ದೈವನಿಂದೆ ಕಿವಿಗೆ ಕೇಳಿಸಿದರೆ ಅದಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತಿದ್ದರು. ವ್ಯರ್ಥವಲ್ಲವೆ ಜನ್ಮ ವ್ಯರ್ಥವಲ್ಲವೆ, ಅರ್ತಿಯಿಂದ ಹರಿಯನಾಮ, ನಿತ್ಯಸ್ಮರಿಸದವನ ಜನ್ಮ ಎಂದು ತಮ್ಮ ಅಳಲು ತೋಡಿಕೊಂಡಿದ್ದಾರೆ. ಕುಲವೃತ್ತಿ ವ್ಯಾಪಾರವಲ್ಲವೆ? ಅದನ್ನು ಅವರು ಶ್ರೀಹರಿಯೊಡನೆ ಮಾಡುತ್ತಾರೆ. ವ್ಯಾಪಾರ ನಮಗಾಯಿತು. ಶ್ರೀಪತಿ ಪಾದಾರದಿಂದ ಸೇವೆಯೆಂಬ, ನಿಮ್ಮ ಭಾಗ್ಯ ದೊಡ್ಡದೋ ನಮ್ಮ ಭಾಗ್ಯ ದೊಡ್ಡದೋ ಸಮ್ಮತಿಂದು ನಾವು ನೀವೂ ಸಾಟಿ ಮಾಡಿ ನೋಡು ಬನ್ನಿ ಎಂದು ಹಾಡುತ್ತಾರೆ. ಶ್ರೀ ಕೃಷ್ಣ ಪರಮಾತ್ಮನಲ್ಲಿ ಅಪಾರ ಪ್ರೀತಿ, ಮಮತೆ, ಕೃಷ್ಣನನ್ನು ಕುರಿತು ಎಷ್ಟು ಹಾಡಿದರೂ ಅವರಿಗೂ ತೃಪ್ತಿಯಿಲ್ಲ ಆಡಿಸಿದಳೆಶೋಧೆ ಜಗದೋದ್ಧಾರನ ಕಲ್ಲು ಸಕ್ಕರೆ ಕೊಳ್ಳಿರೋ ನಿವೇಲ್ಲರೂ ಈ ಪರಿಯ ಸೊಬಗಿನ್ನಾವ ದೇವರೊಳು ಕಾಣೆ ತೂಗಿರೆ ರಂಗನ ತೂಗಿರೆ ಕೃಷ್ಣನ ತೂಗಿರೆ ಅಚ್ಯುತಾನಂತನ ' ಕೃಷ್ಣಾಬಾರೋ ಕೃಷ್ಣಾಬಾರೋ ಕೃಷ್ಣಯ್ಯ ನೀ ಬಾರಯ್ಯ ಅಳುಮದ್ಯಾಕೋರಂಗ ' ತಾಬೆಣ್ಣ ತಾಗೋಪಮ್ಮ, ಯಾದವನೀಬಾ ಯದುಕುಲ ನಂದನ ಏತರ ಚೆಲುವ ರಂಗಯ್ಯ ಹೀಗೆ ಅನೇಕ ಗೀತೆಗಳನ್ನು ರಚಿಸಿದ್ದಾರೆ. ಜೀವನದ ಹಲವಾರು ಮೌಲ್ಯ ತತ್ವಗಳ ಕುರಿತು ಹಾಡುವಾಗ ಭಾವಪರವಶರಾಗಿ ಮೈಮರೆಯುತ್ತಾರೆ.

ಮಡಿಮೈಲಿಗೆಯೆಂದು ಡಂಭಾಚಾರ ತೋರುವ ಆತ್ಮಶುದ್ಧಿಯಿಲ್ಲದವರ ಬಗ್ಗೆ ಮರುಕ ತೋರುತ್ತಾರೆ. ಮಡಿ ಮಡಿ ಮಡಿಯೆಂದಡಿಗಡಿಗ್ಹಾರುತಿ ಮಡಿ ಮಾಡುವ ಬಗೆ ಬೇರುಂಟು, ತನುವ ನೀರೊಳಗದ್ದಿ ಫಲವೇನು? ತಮ್ಮ ಮನದಲ್ಲಿ ದೃಡ ಭಕ್ತಿಯಿಲ್ಲದ ಮನುಜರು ಎಂದಿದ್ದಾರೆ.

ಅವರ ಅನೇಕ ಕೀರ್ತನೆಗಳಲ್ಲಿ ಸಾಮಾಜಿಕ ಕಳಕಳಿ ಮತ್ತು ವಿಡಂಬನೆ ಕಂಡುಬರುತ್ತದೆ. ಸಮಾಜ ಸುಧಾರಣೆಯ ಜೊತೆಗೆ ಸಾರ್ವತ್ರಿಕ ಮೌಲ್ಯಗಳನ್ನು ಉಳಿಸಿ ಬೆಳೆಸುವುದು ಅವರ ಧ್ಯೇಯವಾಗಿತ್ತು.

> ಮಾನವ ಜನ್ಮ ದೊಡ್ಡದು ಇದ ಹಾನಿ ಮಾಡಬೇಡಿ ಹುಚ್ಚಪ್ಪಗಳಿರಾ,
> ಯಾರು ಸಂಗಡ ಬರೋದಿಲ್ಲ, ನಾರಾಯಣ ನಾಮನೆರೆ ಬರೋದಲ್ಲದೆ,
> ಮಾಡು ಸಿಕ್ಕುದಲ್ಲಾ ಮಾಡಿನ ಗೂಡುಸಿಕ್ಕದಲ್ಲಾ ಜೋಡು ಹೆಂಡಿರಂಜಿ ಓಡಿ ಹೋಗುವಾಗ,
> ಹರಿಕೊಟ್ಟ ಕಾಲಕ್ಕೆ ಉಣಲಿಲ್ಲ. ಹರಿಕೊಡದ ಕಾಲಕ್ಕೆ ಬಾಯಿ ಬಿಡುವೆಯಲ್ಲೋ ಪ್ರಾಣಿ
> ಅಲ್ಲದೆ ನಮ್ಮನೆ ಇಲ್ಲಿ ಬಂದೆ ಸುಮ್ಮನೆ ಕದಬಾಗಿಲಿರಿಸಿಹ ಕಳ್ಳಮನೆಯಿದು
> ಇಕ್ಕಲಾರೆ ಕೈ ಎಂಜಲು ಚಿಕ್ಕಮಕ್ಕಳು ಅಳುತಾರೆ ಹೋಗೊ ದಾಸಯ್ಯ
> ಆಚಾರವಿಲ್ಲದ ನಾಲಿಗೆ ನಿನ್ನ ನೀಚ ಬುದ್ಧಿಯ ಬಿಡು ನಾಲಗೆ.

ಭಕ್ತಿ, ಮನುಕುಲ, ಸಮಾನತೆ, ಏಗಾಗ್ರತೆ, ಒಗ್ಗಟ್ಟು, ಶ್ರದ್ಧೆ ಮತ್ತು ಉದಾರತೆಯ ಮೌಲ್ಯಗಳ ಕುರಿತು ಹಾಡುಗಳನ್ನು ರಚಿಸಿದ್ದಾರೆ.
ಹೀಗೆ ಅನೇಕ ಗೀತೆಗಳಲ್ಲಿ ಸಮಾಜ ಸುಧಾರಣೆಯ ಸಾಮಾಜಿಕ ಕಳಕಳಿಯ ಮಾತುಗಳನ್ನಾಡುತ್ತಾರ. ಶ್ರೀ ಹರಿಯನ್ನಲ್ಲದೆ ಇತರೆ ದೇವತೆಗಳನ್ನು ಕುರಿತು ಹಾಡುಗಳನ್ನು ರಚಿಸಿದ್ದಾರೆ.

> ರಾಮಮಂತ್ರವ ಜಪಿಸೋ ಹೇ ಮನುಜ ಗಜವದನ ಬೇಡುವೆ ಗೌರಿತನಯ
> ಚಂದ್ರಚೂಡ ಶಿವಶಂಕರ ಪಾರ್ವತಿ ರಮಣ ನಿನಗೆ ನಮೋ
> ಶರಣುಸಿದ್ಧ ವಿನಾಯಕ
> ಇಂದು ನಿನ್ನ ಮೊರೆಯ ಹೊಕ್ಕೆ ವೆಂಕಟೇಶನೆ
> ಇಂದು ನಿನ್ನ ಮೊರೆಯಹೊಕ್ಕೆ ವೆಂಕಟೇಶನೇ
> ಭಾಗ್ಯದ ಲಕ್ಷ್ಮೀ ಭಾರಮ್ಮ

ಎಂಥಾ ಚೆಲುವಿಗೆ ಮಗಳನು ಕೊಟ್ಟನು ಗಿರಿರಾಜನು ನೋಡಮ್ಮಾ ಘಟಿಕಾಚಲದಿ ನಿಂತ ಶ್ರೀ ಹನುಮಂತ ಮೊದಲಾದ ಹಾಡುಗಳಲ್ಲಿ ಕಾಣಬಹುದು ಮೇಲು ಕೀಳೆಂಬ ಜಾತಿ ಬೇದದ ಬಗ್ಗೆ ಅವರು ಆತ್ಮಶೋಧನೆ ಮಾಡಿಕೊಳ್ಳಲು ಹೇಳಿದ್ದಾರೆ.

> ಹೊಲೆಯ ಬಂದನೆಂದು ಬಳಗೆ ದೇವರ ಮೂಡಿ ಗಣಗಣಗಂಟೆಯ ಬಾರಿಸುವರಯ್ಯ

ಹೊಲೆಯ ಹೊಲತಿ ಇವರವರಲ್ಲಿ ಹೊಲಗೇರಿಯೊಳು
ಎಂದು ತಾಳ್ಮೆಯ ಧ್ಯೇಯ,ಶೌರ್ಯ, ಏಕಾಂತ, ಏಕಾಗ್ರತೆ, ಸ್ವಾಮ್ಯತೆ, ನಂಬಿಕೆಯ ಮೌಲ್ಯಗಳನ್ನು ಪ್ರತಿಪಾದಿಸಿದ್ದಾರೆ.

<u>ಕನಕದಾಸರು:</u>

ಭಕ್ತಿಯ ಸ್ವರೂಪವನ್ನು ಎಂಟು ಬಗೆಯಲ್ಲಿ ನಾವು ಕಾಣಬಹುದು ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಆತ್ಮನಿವೇದನ, ಅರ್ಚನೆ, ವಂದನೆ ಇವು ಸಾಧನ ಮಾರ್ಗಗಳೆನಿಸಿಕೊಂಡವು. ನಿರ್ಮಲವಾಧ ಭಕ್ತಿಯೇ ಮುಕ್ತಿಗೆ ಸಾಧನವೆಂದು ಹರಿದಾಸರು ಸಾಮಾನ್ಯರಿಗೆ ಮಾರ್ಗದರ್ಶನ ನೀಡಿದರು. ಕನಕದಾಸರು ಶ್ರೀ ವೈಷ್ಣವದೀಕ್ಷೆ ಪಡೆದು ತಾತಾಚಾರ್ಯರ ಬಳಿಯಿದ್ದರೆಂದು ನಂತರ ಶ್ರೀ ವ್ಯಾಸರಾಜರ ಭೇಟಿಯಾಗಿ ಮಧ್ವಮತಕ್ಕೆ ಮನಸೋತು ವ್ಯಾಸರಾಜರ ಶಿಷ್ಯರಾಗಿ ಮಧ್ವಮತಾನುಯಾಯಿಗಳಾದರೆಂದು ಕೆಲವರು ಹೇಳುತ್ತಾರೆ.
ಇವರು ರಾಮಧಾನ್ಯಚರಿತ್ರೆ, ನಳಚರಿತ್ರೆ, ಹರಿಭಕ್ತಿಸಾರ, ಮೋಹನ ತರಂಗೀಣಿ ಮೊದಲಾದ ಕಾವ್ಯಗಳನ್ನು ರಚಿಸಿದ್ದಾರೆ. ಕನಕದಾಸರು ಹರಿದಾಸರೂ ಕವಿಗಳೂ ಕೀರ್ತನಕಾರರೂ ಆಗಿದ್ದಾರೆ.
ಕನಕದಾಸರು ಕಾಂಭೋದಿರಾಗ ಮತ್ತು ಝಂಪೆ ತಾಳದಲ್ಲಿ ಅನೇಕ ಕೀರ್ತನೆಗಳನ್ನು ರಚಿಸಿದ್ದಾರೆ. ನೀ ಮಾಯೆಯೊಳಗೋ ನಿನ್ನೊಳು ಮಾಯೆಯೋ, ಆರು ಹಿತವರು, ಎಂದು ನಂಬಬೇಡ ಯಾರಿಗ್ಯಾರಿಲ್ಲ, ಆಪತ್ತು ಬಂದೊದಗಿದಡೆ, ಕನಕದಾಸರ ಮೇಲೆ ದಯೆ ಮಾಡಲು ವ್ಯಾಸಮುನಿ ಮಠಿಕರೆಲ್ಲರೂ ದೂರುತಿಹರೋ, ಅಹುದಾದರಹುದೆನ್ನಿ ಅಲ್ಲವಾದರಲ್ಲವೆನ್ನಿ, ಹೀಗೆ ಅನೇಕ ಕೀರ್ತನೆಗಳನ್ನು ಕಾಂಭೋದಿರಾಗದಲ್ಲಿ ರಚಿಸಿದ್ದಾರೆ. ಇದಲ್ಲದೆ ವಸಂತ, ನಾದನಾಮಕ್ರಿಯೆ, ಮಧ್ಯಮಾವತಿ, ಪಂತುವರಾಳಿ, ಮುಖಾರಿ, ಕೇದಾರಗೌಳ, ಸಾವೇರಿ, ಶಂಕರಾಭರಣ, ಅರಭಿ, ರೇಗುಪ್ತಿ, ಸುರಟಿ, ಸೌರಾಷ್ಟ್ರ, ಶುದ್ಧಧನ್ಯಾಸಿ, ಶ್ರೀರಾಗ, ಬೈರವಿ, ಮೊದಲಾದ ರಾಗಗಗಳಲ್ಲಿ ಅನೇಕ ಕೀರ್ತನೆಗಳನ್ನು ರಚಿಸಿದ್ದಾರೆ.
ಕನಕದಾಸರು ತಮ್ಮ ಸಾಹಿತ್ಯದಲ್ಲಿ ಹರಿಭಕ್ತಿಯನ್ನು ತೋರುವುದಲ್ಲದೆ ಸಮಾಜವನ್ನು ತಿದ್ದಿ ಪ್ರಜೆಗಳು ಸನ್ಮಾರ್ಗದಲ್ಲಿ ಬಾಳಲು ದಾರಿದೀಪ ತೋರಿದ್ದಾರೆ ಗೋವಿಂದ ಸಲಹೆನ್ನನು ಸದಾನಂದ ಗೋವಿಂದ, ತಲ್ಲಣಿಸದರು ಕಂಡ್ಯ ತಾಳುಮನವೆ, ಬಾಗಿಲನು ತೆರೆದು ಸೇವೆಯ ಕೊಡೋ ಹರಿಯೆ, ಮೊದಲಾದ ಕೀರ್ತನೆಗಳಲ್ಲಿ ಅವರ ಹರಿಭಕ್ತಿಯನ್ನು ಕಾಣಬಹುದು.
ಅಜ್ಞಾನಿಗಳ ಕೂಡ ಅಧಿಕಸ್ನೇಹಕ್ಕಿಂತ ಸುಜ್ಞಾನಿಗಳ ಜೊತೆ ಜಗಳವೇ ಲೇಸು , ದುರ್ಜನರ ಸಂಗ ಎಂದಿಗೊಲ್ಲೆನು ಹರಿಯೇ, ಏನು ಇಲ್ಲದ ಎರಡು ದಿನದ ಸಂಸಾರ, ಜ್ಞಾನದಲ್ಲಿ ದಾನಧರ್ಮವ ಮಾಡಿರಯ್ಯಾ, ತೀರ್ಥವನು ಪಿಡಿದವರೆಲ್ಲ ತಿರುನಾಮಧಾರಿಗಳೇ, ಜನ್ಮಸಾರ್ಥಕವಿಲ್ಲದವರೆಲ್ಲ ಭಾಗವತರೇ, ಮರೆಯದಿರು ಮರೆಯದಿರು ಮರುಳು ಮನುಜಾ ನಾರಾಯಣ ಸ್ಮರಣೆ ಮಾಡು ಮನುಜ, ಜಪವ ಮಾಡಿದರೇನು ತಪವ ಮಾಡಿದರೇನು ಕಪಟಗುಣ ವಿಪರೀತ ಕಲುಷವಿದ್ದರು, ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ತುತ್ತು ಹಿಟ್ಟಿಗಾಗಿ, ನಾನು ನೀನು ಎನ್ನದಿರು ಹೀಗೆ ಮನುಜ ಎಂಥು ಮೌಲಿಕವಾದ ತಮ್ಮ ಕೀರ್ತನೆಗಳಿಂದ ಜನಜಾಗೃತಿಯುಂಟು ಮಾಡಿದ್ದಾರೆ.
ಕನಕದಾಸರು ಶ್ರೀಹರಿಯನ್ನಲ್ಲದೆ ಇತರೆ ದೇವತೆಗಳನ್ನು ಸ್ತುತಿಸಿ ಕೀರ್ತನೆಗಳನ್ನು ಬರೆದಿದ್ದಾರೆ. ನಮ್ಮಮ್ಮ ಶಾರದೆ ಉಮಾಮಹೇಶ್ವರಿಯಲ್ಲಿ ಶಾರದೆಯನ್ನು, ಗಣಪನನ್ನು ಶಿವ ಶಿವಶಿವ ಎನ್ನಿರೋ ಮೂಜಗದವರೆಲ್ಲ ಕೀರ್ತನೆಗಳ್ಲಿ ಶಿವನನ್ನು ಎನ್ನ ಹಳ್ಳಿಯ ಕಂದ ಹನುಮ ಕೀರ್ತನೆಯಲ್ಲಿ ಹನುಮನನ್ನು ನಾವು ಕುರುಬರು ನಮ್ಮ ದೇವರು ಬೀರಯ್ಯ ಹೀಗೆ ಇತರೆ ದೇವತೆಗಳನ್ನು ಕುರಿತು ಹಾಡಿದ್ದಾರೆ.
ಗೋಪಾಲದಾಸರು ವಿರಕ್ತಿಯ ಬಗ್ಗೆ ಸುಂದರ ಚಿತ್ರವನ್ನು ಎಷ್ಟು ಮಮತೆಯೊ ನಿನಗೆ ಭ್ರಷ್ಟಮನವೆ ಎಂಬ ಪಲ್ಲವಿಯಿಂದ ಆರಂಭವಾಗುವ ಕೀರ್ತನೆಯಲ್ಲಿ ಲೌಕಿಕದ ಬದುಕಿನಲ್ಲಿ ವೃಷ್ಟಿ ಅಳಿಬಿಳಿಯಾದರೆ ಆಳದಿಂದ ಮೇಲೆ ಜಿಗಿಯಲು ಸಾಧ್ಯವೆ ಇಲ್ಲ ಅದಕ್ಕಾಗಿ ಆಸೆಯೆಂಬೋದು ಸಂಧಿಸಿಕೊಂಡರೆ ನಿನಗೆ ದೋಷವೆಂಬೋದು ರಾಶಿ ಆಶ್ರಯಿಸೋದು ಎಂಬ ಎಚ್ಚರಿಕೆಯೊಡನೆ ಎಳೆಎಳೆಯಾಗಿ ಬಿಡಿಸಿಟ್ಟಿದ್ದಾರೆ. ಈ ಜನ್ಮವನ್ನು ಏನು ಸುಖವೋ ಎಂತ ಸುಖವೋ ಎಂದು ಬಣ್ಣಿಸುತ್ತ ಈ ದೇಹವನ್ನು ದರ್ಪಣಯಂತೆ ದೇಹವನ್ನು ಸರ್ವದಾ ತಿಳವಳಿಕೆಯಿಂದ ನಡೆಸಬೇಕೆಂದು ಮನವನ್ನು ದೃಢವಾಗಿರಿಸಿಕೊಂಡು ದುಷ್ಟರ ಸಂಸರ್ಗವನ್ನು ತೊರೆದು ಅನುಮಾನವನ್ನು ಸುಟ್ಟುಕಾಮ, ಕ್ರೋಧ, ಮದ, ಮತ್ಸರ, ಮೋಹಗಳನ್ನೆಲ್ಲ ತೂರಿಬಿಟ್ಟು ಸಮಸ್ಥರಿಯಾಗಬೇಕೆಂದು ನೀತಿ ವಿಧಿಸಿ ಸಹಜವೃತಕ್ಕೆ ಬದುಕನ್ನು ಉದ್ಯೋಗಿಸಬೇಕೆಂಬಲ್ಲಿ ಸಹಜ ಸಂಸಾರ ಯೋಗವು ಮನುಷ್ಯ ಜನ್ಮದ ಮಹತ್ವವನ್ನು ಹೇಳುತ್ತದೆ.
ಈ ಶೋಭೆ ಸಾಮಾಜಿಕ ನೆಮ್ಮದಿಗೆ ಅಂತರಂಗದ ಬೆಳಕಾಗಬೇಕಾದರೆ

ಸಂಸಾರದ ನೀರ ಮಡುವಿನೊಳಗೆ ಇಳಿದು ಬುಡುಗುಳಿಯಂತೆ ಮಂತ್ರಗಳ ಗುಡುಗುಡಿಸುವುದನ್ನು ಬಿಟ್ಟು ಬಡಿವಾರತನಕ್ಕೆ ತಿಲಾಂಜಲಿಯನ್ನಿತ್ತು ದೋಷಗಳನ್ನೆಲ್ಲ ನಿರ್ಘೋಷಗೊಳಿಸುತ್ತ ಸಾಧನಾ ಜೀವಿಯಾಗಿರಬೇಕೆನ್ನುತ್ತಾರೆ. ದಾಸರು ಹೀಗೆ ಗೋಪಾಲದಾಸರ ಸುಳಾದಿಯು ನೇರ ನುಡಿಯಿಂದ ಜಾಗೃತಗೊಳಿಸುತ್ತದೆ. ಇಂತಹ ವಿವೇಕದ ವ್ಯಾಪ್ತಿಯಲ್ಲಿ ಸಿದ್ಧಿಪಡೆದ ಬದುಕು ತನ್ನದನ್ನು ಲೋಕಹಿತಾರ್ಥ ತ್ಯಾಗ ಮಾಡಿ ಭೂವ್ಯೋಮ ಪಾತಾಳಗಳಲ್ಲಿ ಸ್ಥಿರವಾದ ಹೆಜ್ಜೆಗಳನ್ನು ಮೂಡಿಸುತ್ತದೆ.

ಆರೋಗ್ಯ ,ಆಯುಷ್ಯ, ಐಶ್ವರ್ಯವೆಂಬೊ ಈ ಮೂರು ವಿಧ ವಸ್ತುಗಳು ನಾರಾಯಣ ಭಜಕರಾದವರ ಸಾಧನಕೆ ಪೂರವವಾಗಿಪ್ಪವು, ಘೋರ ವ್ಯಬಿಚಾರ ಪರನಿಂದೆ ಪರವಿತ್ತಾಪಹಾರ ಮಾಡಿದ ದೋಷದಿ ದರಿದ್ರರಾಗುವರು ಮೂರು ವಿಧದಿಂದಲಿ,

ಕಾರಣನು ನೀನೆ ದುಷ್ಕರ್ಮ ಪರಿಹರಿಸುವುದು ಹರಿಯೇ//

ಇಂತಹ ವಿಚಾರಗಳನ್ನು ಹೊಂದಿರುವ ಸದರಿ ಕೀರ್ತನೆಯು ಯಾವ ಕಾಲಕ್ಕೂ ಸಾಧನಾ ಜೀವಿಗಳಿಗೆ ಸದಾ ಆಯುರ್ವೇದವು ಸಾಥ ಕೊಡುತ್ತದೆ. ಈ ಕ್ರಮದಲ್ಲಿ ಸಾಧನ ಮಾಡಿದ ಗೋಪಾಲದಾಸರಂತೆ ವ್ಯಷ್ಟಿ ವ್ಯಷ್ಟಿಯು ತಾನೂ ಪರೋಪಕಾರಿಯಾಗಿ, ಶುದ್ಧಾಂತ:ಕರುಣೆಯನ್ನು ತುಂಬಿಕೊಂಡು ತ್ಯಾಗಿಯಾಗಿ ಬದುಕಿದರೆ, ಆ ಬದುಕೆಲ್ಲ ಕಲ್ಲುಸಕ್ಕರೆ. ಎತ್ತಣಿಂದ ಸವಿದರೂ ಸವಿಯೇ ಸವಿ. ಇಂಥ ಪರಿಪೂರ್ಣತೆಯ ಬದುಕಿನ ಸರ್ವಾನಂದನವನ್ನು ಪಡೆಯಬೇಕಾದರೆ ಅನಿಷ್ಟಗಳಲ್ಲಿರುವ ಸಶ್ಯಕ್ತತೆಯನ್ನು ಮರೆಮಾಚಿಕೊಂಡು ನಿಂತಿರುವ ಚೆಲುವಿಕೆಯನ್ನು ಸುಂದರ ವ್ಯಕ್ತಿತ್ವ ನಿರ್ಮಾಣಕ್ಕೆ ಹೆಕ್ಕಿ ಪ್ರಯೋಜನ ಪಡೆಯುವ ಶೋಧಿಕರಣವನ್ನು ಬೆಳೆಸಿಕೊಳ್ಳುವುದು ಅನಿವಾರ್ಯವೆಂದುದಾಸರು ಹೇಳುತ್ತಾರೆ. ಆ ಮಾತು ಶುದ್ಧ ಸತ್ಯ ಅಂತೆಯೇ ಅನಿಷ್ಟಗಳ ಮಧ್ಯದಲ್ಲಿ ಬದುಕು ಹಂಸಕ್ಷೀರ ನ್ಯಾಯವನ್ನು ತುಂಬಿಕೊಂಡು ನಿರ್ಲಿಪ್ತತೆಯಲ್ಲಿ ಸ್ವರೂಪದರ್ಶನದಲ್ಲಿ ಸ್ವಾನಂದಿಯಾಗಲು ಸಾಧ್ಯ ಈ ಕುರಿತು ಗೋಪಾಲದಾಸರ

ಇರಬೇಕು ಸಜ್ಜನರಿಗೆ ದುರ್ಜನ
ಪರಿಪರಿ ಪಾಲಿಪುದು ಬಂದು ಸಮಯದಿನ್ನವರ//

ಎಂಬ ಕೀರ್ತನೆಯು ಅನಿಷ್ಟವಾದ ಜೀವಿಗಳನ್ನೂ ಪದಾರ್ಥಗಳನ್ನೂ ಜಗತ್ತಿನಲ್ಲಿ ಒಳಿತನ್ನು ಸಾಧಿಸಲು ಸೊಗಸನ್ನು ನಿರ್ಮಿಸಲು ಬಳಸುವುದೇ ಸಾರ್ಥಕ ಬದುಕು ಎಂಬ ಅರ್ಥವನ್ನು ಸಾರುತ್ತಿದೆ. ಈ ಅಭಿಪ್ರಾಯವು ಸರ್ವಕಾಲಕ್ಕೂ ಒಪ್ಪಿತವಾದದ್ದು.

ಹೀಗೆ ಸಾರ್ವಕಾಲಕ್ಕೂ ಬದುಕು ನೆಮ್ಮದಿಯಾಗಿರಲು ಸೃಷ್ಟಿಯ ಮೂಲದಿಂದ ಸಹಜೀವನದ ರಸಗಂಧ ತೀಡುತ್ತಲೇ ಬಂದಿದೆ. ಆ ಗಾಳಿಯಲ್ಲಿಯ ಉಸಿರೆಂದರೆ ಸೃಷ್ಟಿಯ ಪ್ರತಿಯೊಂದು ಕಣವು ಲೋಕಹಿತಕ್ಕೆ ಪ್ರಯೋಜನಕಾರಿ ಎಂಬ ಧ್ವನಿತ. ಆ ಕಾರಣದಿಂದ ತಾಳಲಿಕ್ಕೆ ಅಸಾಧ್ಯವಾಗಿ ಪಲಾಯನವಾದವನ್ನು ಎತ್ತಿಕಟ್ಟಿಕೊಂಡು ಸಂಸಾರದಿಂದ ಕಾಲ ಕಿತ್ತುವುದು ವೈರಾಗ್ಯವಲ್ಲ. ಸರೋವರದ ಕೆಸರಿನಲ್ಲಿದ್ದರು ಕಮಲ ಪ್ರಜ್ವಲಿಸುವಂತೆ ಎಲ್ಲ ಭಕ್ತಿವಾಹಿನಿಯ ಪರಂಪರೆಯಲ್ಲಿಯ ಸ್ವಾದವನ್ನು ಗೋಪಾಲದಾಸರು ಸಾಧಿಸಿ ತೋರಿದ್ದಾರೆ. ಗೋಪಾಲದಾಸರ ಶಿಷ್ಯರಾದ ಜಗನ್ನಾಥದಾಸರು ತಮ್ಮದೆಕೀರ್ತನೆಯ ಮೂಲಕ ಜನಮಾನಸತಲುಪಿದರು. ಅವರು ವಿಶಿಷ್ಠ ಮೌಲ್ಯಯುತವಾದ ಕೀರ್ತನೆಗಳ ಮೂಲಕ ಜನರನ್ನುತಲುಪಿರುವುದನ್ನುಕಾಣಬಹುದು.

ಅರಿತವರಿಗತಿ ಸುಲಭ ಹರಿಯ ಪೂಜೆ
ಅರಿಯದವ ನಿರ್ಭಾಗ್ಯತರ ಲೋಕದೊಳಗೆ

ಎಂದುತಮ್ಮ ಕೀರ್ತನೆಗಳ ಸಾಲಿನಲ್ಲಿ ಭಕ್ತಿಯುತವಾದ ಮೌಲ್ಯವನ್ನು ಸಾರಿದರು ಹರಿಯನ್ನು ಅರಿತರೆ ಮಾತ್ರಜೀವನ ಸುಂದರ ಸುಲಭಇಲ್ಲದಿದ್ದರೆಜೀವನಅನುಪಯುಕ್ತಎಂದು ಸಾರಿದ್ದಾರೆ.

ಇರಬೇಕು ನಿಂದಕರು ಸಜ್ಜನರಿಗೆ
ದುರಿತರಾಶಿಗಳ ಪರಿಹರಿಸಲೇಸುಗ ನಿತ್ಯ...

ಎಂದು ಹೇಳುತ್ತಾರೆ.ಅಂದರೆ ನಮ್ಮನ್ನುತಿದ್ದುವ, ತೀಡುವ ನಿಂದಕರು ನಮ್ಮ ಮುಂದೆಯೇ ಇರಬೇಕು.ಅಂದಾಗ ನಮ್ಮಜೀವನವನ್ನು ಸುಂದರಗೋಳಿಸಿಕೊಂಡು ಮೌಲ್ಯಯುತಗೊಳಿಸಿಕೋಳ್ಳಬಹುದುಎಂದು ತಿಳಿಸಿದ್ದಾರೆ.

ಹೀಗೆ ದಾಸರ ಹಲವಾರು ಕೀರ್ತನೆಗಳು ಬದುಕಿಗೆ ಸಂಬಂದಿಸಿದ.ಮೌಲ್ಯಗಳನ್ನು ಪ್ರತಿಯೊಂದು ಸಾಲುಗಳಲ್ಲಿಯು ಕಾಣಬಹುದಾಗಿದೆ, ಅವೆಲ್ಲವನ್ನು ಜೀವನದಲ್ಲಿ ಅಳವಡಿಸಿಕೊಂಡು ಮೌಲ್ಯಯುತ ಸಾರ್ಥಕ ಬದುಕನ್ನು ಸಾಗಿಸಬೇಕೆಂದು ಹರಿದಾಸರು ಸಾರಿದ್ದಾರೆ.

**ಆಧಾರ ಗ್ರಂಥಗಳು**


1. ದಾಸ ಸಾಹಿತ್ಯ ಸಾಗರ, ಶ್ರೀ ಹರಿದಾಸ ಸಂಘ ಬೆಂಗಳೂರು 2010.
2. ದಾಸ ಸಾಹಿತ್ಯ ಭಾಷೆ, ಡಾ.ಎಸ್.ಎಸ್.ಅಂಗಡಿ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ,ಹಂಪಿ.
3. ಹತ್ತು ಹಿರಿಯ ಹರಿದಾಸರು,ಡಾ. ಹಯವದನ ಲೋಕೂರು 2008.
4. ಕನಕದಾಸರ ಸಂಪುಟ ಕರ್ನಾಟಕ ಸರಕಾರ 2001
5. ಪುರಂದರ ಸಾಹಿತ್ಯ ಅಧ್ಯಯನ, ಅಮರೇಶ ನುಗಡೋಣಿ,2010.